ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಆದ್ಯತೆ ಮೇರೆಗೆ ಹೋಬಳಿಗೆ ಒಂದು ಕೆರೆ ಎಂದು ಹೇಳಿ ತೆಗೆದುಕೊಂಡಿದ್ದಾರೆ. ಅದಕ್ಕೆ ಸಂಪೂರ್ಣವಾಗಿರತಕ್ಕಂಥಹ ಎಸ್ಟಿಮೇಟ್ ಎಲ್ಲಾ ಮಾಡಿ ಆಗಿದೆ. ಅದಾದ ತಕ್ಷಣ, ತತ್‌ಕ್ಷಣ ಕೆಲಸವನ್ನು ಶುರು ಮಾಡುತ್ತೇವೆ.

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಒಳಚರಂಡಿ ವ್ಯವಸ್ಥೆ

139(1558) ಶ್ರೀಮತಿ ಅನಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ನೈರ್ಮಲ್ಯ ಹದಗೆಟ್ಟಿರುವುದಕ್ಕೆ ಅಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದೇ ಕಾರಣವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಒಳಚರಂಡಿ ನಿರ್ಮಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

ಅ) ಒಳಚರಂಡಿ ವ್ಯವಸ್ಥೆ ಇಲ್ಲದಿರುವುದೂ ಸಹ ಒಂದು ಕಾರಣವಾಗಿರುತ್ತದೆ.

ಆ) ಒಳಚರಂಡಿ ಯೋಜನೆಗೆ ತಲಾದಿನಂಪ್ರತಿ 110 ಲೀಟರ್ ನೀರು ಸರಬರಾಜು ಆಗುತ್ತಿರಬೇಕು ಹಾಲಿ ನೀರು ಸರಬರಾಜು ಯೋಜನೆ ಮುಗಿದ ನಂತರ ಕುಡಿಯುವ ನೀರು ತಲಾ ದಿನಂಪ್ರತಿ 110 ಲೀಟರ್ ನೊರಕಿದಂತಾಗುತ್ತದೆ. ನಂತರ ಒಳಚರಂಡಿ ಯೋಜನೆಯನ್ನು ತಯಾರಿಸಲಾಗುವುದು.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್ : ಸನ್ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಈಗ ನಗರ ಸಭೆ ಆಗಿದೆ. 1996 ರಲ್ಲಿ ಕೆಲವು ಕಸಬಾ ಹಳ್ಳಿಗೆಲ್ಲಾ ಸೇರಿ ಪುರಸಭೆ ಇದ್ದುದು ನಗರಸಭೆ ಆಗಿದೆ. ಆದರೆ ಅಲ್ಲಿ ಕೆಲಸಮಾಡುವ ನೌಕರರು ಕಡಿಮೆ ಇದ್ದಾರೆ. ಮತ್ತೆ ದಿನಗೂಲಿ ನೌಕರರನ್ನು ತೆಗೆದುಕೊಳ್ಳಬಾರದೆಂದು ಕಾನೂನು ಹೇಳಿದೆ. ನಗರದ ನೈರ್ಮಲ್ಯ, ಸ್ವಚ್ಛತೆ, ಆರೋಗ್ಯ ಸೌಂದರ್ಯ ಎಲ್ಲದಕ್ಕೂ ತುಂಬಾ ತೊಂದರೆ ಆಗಿದೆ. ಆದ್ದರಿಂದ ಒಳಚರಂಡಿ ವ್ಯವಸ್ಥೆಯನ್ನು ನನ್ನ ಕ್ಷೇತ್ರಕ್ಕೆ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

11.40 ಎ.ಎಂ.

ಪ್ರಶ್ನೆ ಎರಡಕ್ಕೆ ನೀಡಿರುವ ಉತ್ತರದಲ್ಲಿ " ಬೇಕಾದಷ್ಟು ನೀರಿನ ಅವಶ್ಯಕತೆಯಿದೆ, ಹಾಲಿ ನೀರು ಸರಬರಾಜು ಯೋಜನೆ ಮುಗಿದ ನಂತರ ದಿನಂಪ್ರತಿ ತಲಾ 110 ಲೀಟರ್ ಕುಡಿಯುವ ನೀರು ದೊರಕಿದಂತಾಗುತ್ತದೆ. ಅನಂತರ, ಒಳಚರಂಡಿ ಯೋಜನೆ ತಯಾರಿಸಲಾಗುವುದು " ಎಂದು ತಿಳಿಸಿದ್ದೀರಿ. ಚಿಕ್ಕಬಳ್ಳಾಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಕ್ಕಲಮಡಗಿಯಲ್ಲಿ 3-4 ತಾಲ್ಲೂಕುಗಳಿಗಾಗುವಷ್ಟು ನೀರು ಇರುವುದರಿಂದ ಒಳಚರಂಡಿ ವ್ಯವಸ್ಥೆ ಮಾಡಿಕೊಡಬೇಕೆಮದು ತಮ್ಮಲ್ಲಿ ಸವಿನಯ ಪ್ರಾರ್ಥನೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ ಇದೆ. ಏನೆಂದರೆ, ಯಾರೇ ಒಬ್ಬ ಮಾನ್ಯ ಸದಸ್ಯರು ಪ್ರಶ್ನೆ ಕೇಳುವಾಗ, ಭಾಷಣ ಮಾಡುವಾಗ ಸದನದಲ್ಲಿ ಅತ್ತಿಮದಿತ್ತ ತಿರುಗಾಡುತ್ತಿರುವ ಸದಸ್ಯರಿಗೆ ತಾವು ಹೇಳಬೇಕಾಗುತ್ತದೆ. ಸಭೆಯಲ್ಲಿ ಶಿಸ್ತು ಕಾಪಾಡದೆ ಹೋದರೆ ಬಹಳ ಕಷ್ಟವಾಗುತ್ತದೆ. ಸದನದಲ್ಲಿ ತಿರುಗಾಡುವಂಥ ಅನಿವಾರ್ಯತೆ ಬಂದಾಗ ತಲೆ ತಗ್ಗಿ ಹೋಗಬೇಕಾಗುತ್ತದೆ. ಮಾನ್ಯ ಮಹಿಳಾ ಸದಸ್ಯರು ಪ್ರಶ್ನೆ ಕೇಳಲು ನಿಂತಿದ್ದರೂ ತಿರುಗಾಡವವರು ತಿರುಗಾಡುತ್ತಲೇ ಇದ್ದಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು. ಪ್ರಶ್ನೋತ್ತರ ವೇಳೆಯಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಕಲಿಯಬೇಕು. ಪ್ರಶ್ನೋತ್ತರ ಮುಗಿದ ನಂತರ ಓಡಾಡಿ ಅಥವಾ ಮೊಗಸಾಲೆಗೆ ತೆರಳಿ ಮಾತನಾಡಿ, ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯಾಗಬೇಕೆಂದು ಮಾನ್ಯ ಸದಸ್ಯರು ಕೇಳಿದ್ದು, ಈಗಾಗಲೇ ಅಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಸದರಿ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಅಂದರೆ ಮುಂದಿನ ಏಪ್ರಿಲ್ ತಿಂಗಳಿನೊಳಗೆ ಮುಗಿಸುತ್ತೇವೆ. ನಂತರ ಒಳಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆ.

ಕೆ.ಜಿ.ಎಫ್.ನಲ್ಲಿ ಅನಧಿಕೃತ ಸೇಂದಿ ಮಾರಾಟಗಾರರು

141(1505) ಶ್ರೀ ಎಂ. ಭಕ್ತವತ್ಸಲಂ(ಕೆ.ಜಿ.ಎಫ್.) : ಮಾನ್ಯಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಂದಿ ಮಾರಾಟವನ್ನು ಕರ್ನಾಟಕದಲ್ಲಿ ನಿಷೇಧಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿ)

ಅ) ರಾಜ್ಯದಲ್ಲಿ ಮೂರ್ತೆದಾರರ ಸಹಕಾರ ಸಂಘಗಳ ಮೂಲಕ ದಕ್ಷಿಣ ಕನ್ನಡ, ಉಡುಪಿ, ಗುಲ್ಬರ್ಗಾ, ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸೇಂದಿ ಮಾರಾಟಕ್ಕೆ ಅವಕಾಶ ಇದ್ದು, ಇದನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲಿ ಸೇಂದಿ ಮಾರಾಟವನ್ನು ನಿಷೇಧಿಸಲ್ಪಟ್ಟಿದೆ.

ಆ) ಸೇಂದಿ ಮಾರಾಟದ ನಿಷೇಧವು ಅನುಸರಣೆಯಾಗುವಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಎಂ. ಭಕ್ತವತ್ಸಲಂ: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಗುಲ್ಬರ್ಗಾ, ರಾಯಚೂರು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸೇಂದಿ ಮಾರಾಟಕ್ಕೆ ಅನುಮತಿ ನೀಡಲಾಗಿದೆಯೆಂದು ತಿಳಿಸಿದ್ದಾರೆ. ಮತ್ತು ಉಳಿದ ಬೇರೆ ಜಿಲ್ಲೆಗಳಲ್ಲಿ ಸೇಂದಿ ಮಾರಾಟ ಮಾಡಲು ಅನುಮತಿ ಕೊಟ್ಟಿಲ್ಲವೆಂದು ಸಹ ಹೇಳಿದ್ದಾರೆ. ಸೇಂದಿ ಕುರಿತು ಹೇಳಬೇಕೆಂದರೆ, ನನ್ನ ಕ್ಷೇತ್ರವಾದ, ಕೆ.ಜಿ.ಎಫ್. ಸೇಂದಿ ಸಾಮ್ರಾಜ್ಯವಾಗಿದೆ. ಕೆಜಿ ಎಫ್‌ನಲ್ಲಿನ ಚಾಂಪಿಯನ್ ರೀಫ್, 'ಹೆಚ್' ಬ್ಲಾಕ್ ಮನೆ ನಂ.42 ರಲ್ಲಿ ಕೃತಕ ಸೇಂದಿ ಕಾರ್ಖಾನೆಯೊಂದನ್ನು ಪ್ರಾರಂಭಿಸಿ ಕೆ ಜಿ ಎಫ್ ದಾದ್ಯಂತ